PW.1

### ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

## CC No.307/2018

ದಿನಾಂಕ 05.03.2026 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ : -

1. ನಾನು ದ್ವಿತೀಯ ಪಿಯುಸಿ ವರೆಗೂ ವ್ಯಾಸಾಂಗ ಮಾಡಿದ್ದೇನೆ. ನಾನು ಈಗ ಸ್ಟೀಲ್ ವ್ಯಾಪಾರ ಮಾಡುತ್ತೇನೆ. ಮುಂಚೆ ವ್ಯವಸಾಯ ಮಾಡುತ್ತಿದ್ದೆ. ನಾನು ಈ ಮುಂಚೆ ಯಾವುದೇ ವ್ಯವಸಾಯ ಮಾಡುತ್ತಿರಲಿಲ್ಲ ಆದರೆ ಬಡ್ಡಿ ಹಾಗೂ ಹಣ ಲೇವಾದೇವಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸ್ನೇಹಿತನಾಗಿರುತ್ತಾನೆ ಆತ ನನಗಿಂತಲೂ ಒಂದು ವರ್ಷ ಸೀನಿಯರ್ ಆಗಿದ್ದು ಆ ಮೂಲಕ ಪರಿಚಯನಾಗಿರುತ್ತಾನೆ. ಆರೋಪಿ ಮತ್ತು ನಾನು ಕೋಡಿಹಳ್ಳಿ ಗ್ರಾಮದವರಾಗಿರುತ್ತೇವೆ. 2017 ನೇ ಇಸವಿಯ ಜೂನ್ ಮೊದಲನೇ ವಾರದಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿರುತ್ತಾರೆ. ಆಗ ನಾನು ಹಣ ಕೊಟ್ಟಿರುತ್ತೇನೆ. ನಾನು ಹಣ ಕೊಟ್ಟ 5-6 ದಿನಗಳ ಮುಂಚೆ ಅವರು ಈ ರೀತಿ ಹಣ ಬೇಕು ಎಂದು ಕೇಳಿದ್ದರು. ಆರೋಪಿ ನನ್ನ ಬಳಿ 5-6 ದಿನಗಳ ಮುಂಚೆ ಹಣ ಕೇಳಿದ್ದು ನಾನು ಜೂನ್ ಮೊದಲನೇ ವಾರದಲ್ಲಿ ಹಣ ಕೊಟ್ಟಿರುವುದಾಗಿ ಬರೆಸಿರುವುದಿಲ್ಲ. ಈ ರೀತಿ ಬರೆಸಲು ನನಗೆ ಯಾವುದೇ ಆಡಚಣೆ ಇರಲಿಲ್ಲ.

2. ನಾನು ತೆರಿಗೆ ಪಾವತಿ ಮಾಡುತ್ತಿರಲಿಲ್ಲ. ನಾನು ಐಟಿ ಮಾಡಿಸಿರುವುದಿಲ್ಲ. ನಾನು ಹಸು ಮಾರಿದ ಹಾಗೂ ವ್ಯವಸಾಯದಿಂದ ಬಂದ ಹಣವನ್ನು ಆರೋಪಿಗೆ ಕೊಟ್ಟಿದ್ದೆ. ನನ್ನ ಬಳಿ 9 ಹಸುಗಳು ಇದ್ದವು. 3 ಎಕರೆ ಜಮೀನು ಇರುತ್ತದೆ. ನಾನು 9 ಹಸುಗಳನ್ನು ಮಾರಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಒಂದೊಂದು ಹಸುವಿಗೆ 25 ರಿಂದ 30 ಸಾವಿರ ಆಗಿನ ಕಾಲಕ್ಕೆ ಅದರ ಮೌಲ್ಯವಿತ್ತು. ನನ್ನ ಬಳಿ 4 ಲಕ್ಷ ಹಣ ಇತ್ತು ಎಂಬುದಾಗಿ ತೋರಿಸಲು ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ನಾನು ಬ್ಯಾಂಕ್ ವ್ಯವಹಾರ ಮಾಡುತ್ತಿದ್ದೆ. ಈ ಸಂಬಂಧ ನಾನು ಯಾವುದೇ ದಾಖಲಾತಿ ಕೊಟ್ಟಿರುವುದಿಲ್ಲ. ನಾನು

ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಆತನಿಗೆ ಸೇರಿದ ಒಂದು ಖಾಲಿ ಚೆಕ್ಕನ್ನು ಭರ್ತಿ ಮಾಡಿ ಈ ರೀತಿ ಒಂದು ಸುಳ್ಳು ದೂರನ್ನು ಹಾಕಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿಯೇ ಭರ್ತಿ ಮಾಡಿ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

3. ಆರೋಪಿ ನನ್ನ ಬಳಿ 2012-13 ರಲ್ಲಿ ಕೈ ಸಾಲದಂತೆ 1 ಲಕ್ಷ ಮೊತ್ತವನ್ನು ಶೇಕಡಾ 5 ರಂತೆ ಬಡ್ಡಿ ರೂಪದಲ್ಲಿ ಪಡೆದುಕೊಂಡಿದ್ದರು ಎಂದರೆ ಸುಳ್ಳು. ನಂತರ ಅವರು 4 ರಿಂದ 5 ವರ್ಷದ ಒಳಗೆ ಶೇಕಡಾ 5 ರಂತೆ ಬಡ್ಡಿ ಕಟ್ಟಿ ಹಣವನ್ನು ಮರು ಪಾವತಿ ಮಾಡಿದ್ದರು ಎಂದರೆ ಸುಳ್ಳು. ಸದರಿ 1 ಲಕ್ಷ ಹಣವನ್ನು ಕೈ ಸಾಲವಾಗಿ ಕೊಟ್ಟ ಸಮಯದಲ್ಲಿ ಆರೋಪಿಗೆ ಸಂಬಂಧಿಸಿದ 2 ಖಾಲಿ ಚೆಕ್ಕು ಹಾಗೂ ಆತನ ಹೆಂಡತಿಗೆ ಸಂಬಂಧಿಸಿದ 1 ಖಾಲಿ ಚೆಕ್ಕನ್ನು ಭದ್ರತೆಯ ಸಲುವಾಗಿ ನಾನು ಪಡೆದುಕೊಂಡಿದ್ದೆ ಎಂದರೆ ಸುಳ್ಳು. ಆರೋಪಿಯು ಸಂಪೂರ್ಣ ಹಣವನ್ನು ಮರುಪಾವತಿ ಮಾಡಿದ ನಂತರ ಸುಮಾರು ಬಾರಿ ಚೆಕ್ಕುಗಳನ್ನು ವಾಪಸ್ ಕೇಳಿದಾಗ ಅವು ಕಳೆದು ಹೋಗಿರುತ್ತವೆಂದು ಸಾಬೂಬು ಕೊಟ್ಟಿದ್ದೆ ಎಂದರೆ ಸರಿಯಲ್ಲ.

4. ಸದರಿ ಚೆಕ್ಕುಗಳಲ್ಲಿ ದಿನಾಂಕ ನಮೂದಾಗಿರುವ ಬರವಣಿಗೆ ಬೇರೆ ಹಣದ ಮೊತ್ತ ನಮೂದಾಗಿರುವ ಬರವಣಿಗೆ ಬೇರೆ ಹಾಗೂ ಸಹಿ ಬೇರೆ ಬರವಣಿಗೆಯಲ್ಲಿರುತ್ತದೆಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಅವರು ಚೆಕ್ಕನ್ನು ಭರ್ತಿ ಮಾಡಿಕೊಂಡು ಬಂದು ನನಗೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿಪಿ-1 ಮತ್ತು 2 ಆರೋಪಿ ಭರ್ತಿ ಮಾಡಿ ಕೊಟ್ಟಿರುವುದಿಲ್ಲ ಅದರಲ್ಲಿ ಬರವಣಿಗೆ ವ್ಯತ್ಯಾಸವಿದೆ ಆದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಕೇವಲ 1 ಲಕ್ಷ ಹಣವನ್ನು ತೆಗೆದುಕೊಂಡಿದ್ದು ಅದನ್ನು ಮರುಪಾತಿ ಮಾಡಿದ್ದರೂ ಸಹಿತ ಭದ್ರತೆಗಾಗಿ ಕೊಟ್ಟ ಖಾಲಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರನ್ನು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ಅಂಶಗಳ ಬಗ್ಗೆ ನಾನು ತಿಳಿದಕೊಂಡಿಲ್ಲ.

5. ನಾನು ಆರೋಪಿಗೆ ವಕೀಲರ ಮುಖಾಂತರ ನೋಟೀಸು ಕೊಟ್ಟಿರುತ್ತೇನೆ. ದಿಃ28.09.2018 ರಲ್ಲಿ ನಾನು ಆರೋಪಿಗೆ ನೋಟೀಸು ಕೊಟ್ಟಿರುತ್ತೇನೆ. 2 ಬಾರಿ ನೋಟೀಸು ತಲುಪಿರುವುದಿಲ್ಲ, ನಂತರದಲ್ಲಿ ಅವರು ಮನೆ ಖಾಲಿ ಮಾಡಿಕೊಂಡಿರಬಹುದು ಎಂದು ಅಂಚೆ ಇಲಾಖೆಯವರು ತಿಳಿಸಿದ ಮೇರೆಗೆ ಮೂರನೇ ಬಾರಿಗೆ ನಾನೇ ಖುದ್ದಾಗಿ ಮನೆ ತೋರಿಸಿದ್ದು ನಂತರ ನೋಟೀಸು ಜಾರಿಯಾಗಿರುತ್ತದೆ. ನನಗೆ ಆರೋಪಿಯ ಪೂರ್ಣ ವಿಳಾಸ ಹೇಳಲಾಗುವುದಿಲ್ಲ ಆದರೆ ಕೋಡಿಪುರದಲ್ಲಿ ವಾಸವಿರುತ್ತಾರೆ.

6. ಸಾಮಾನ್ಯವಾಗಿ 4 ಲಕ್ಷ ಹಣವನ್ನು ಸಾಲವಾಗಿ ಕೊಡುವಾಗ ಆ ವ್ಯಕ್ತಿಯ ಪೂರ್ವಪರ ವಿಚಾರಣೆ ಮಾಡಿ ಹಾಗೂ ಆತ ಮರುಪಾವತಿ ಮಾಡಲು ಆಗುತ್ತದೆಯಾ ಎಂದು ವಿಚಾರಣೆ ಮಾಡಿ ಕೊಡಬೇಕೆಂದರೆ ಸಾಕ್ಷಿಯು ಆರೋಪಿಯು ಕೆ ಎಸ್ ಆರ್ ಟಿ ಸಿ ಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಸದರಿ ಆರೋಪಿ ಕೆ ಎಸ್ ಆರ್ ಟಿ ಸಿ ಯಲ್ಲಿ ಕೆಲಸ ಮಾಡುತ್ತಿರುವುದಾಗಿ ಆತನ ಬಳಿ ಹೆಚ್ಚಿ ನ ಆದಾಯ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. 4 ಲಕ್ಷ ಹಣವನ್ನು ಕೊಡುವಾಗ ಈ ಸಂಬಂಧ ಯಾವುದೇ ಕರಾರುಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ ಆತನ ತಂದೆ ಹಾಗೂ ಹೆಂಡತಿ ಕೂಡ ಬಂದ ಕಾರಣ ಮತ್ತು ಅವರ ತಂದೆಯ ಪರಿಚಯವಿದ್ದ ಕಾರಣ ನಾನು ಹಣ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಆರೋಪಿ ಹಾಗೂ ಆತನ ಹೆಂಡತಿ ಮಾತ್ರ ಹಣಕಾಸು ಪಡೆಯುವಾಗ ಬಂದಿದ್ದರು ತಂದೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಆತನ ಹೆಂಡತಿ ಕೇವಲ 1 ಲಕ್ಷ ಹಣ ಪಡೆಯಲು ಬಂದಿದ್ದರು 4 ಲಕ್ಷ ಅಲ್ಲ ಎಂದರೆ ಸರಿಯಲ್ಲ. ಹೆಚ್ಚಿ ನ ದುಡ್ಡನ್ನು ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ದ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ** **ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ**

**ಕನಕಪುರ .**